ದಿನಾಂಕ : 12-7-89ರಂದು ಅಂದಿನ ಮಂಡಲ ಪಂಚಾಯತ್ ಈ ಮಂಜೂರಾತಿಯನ್ನು ರದ್ದುಪಡಿಸಿ ಪುನಃ ಹೊಸದಾಗಿ 79 ಫಲಾನುಭವಿಗಳಿಗೆ ಮಂಡಲ ಪಂಚಾಯತಿ ಹಕ್ಕುಪತ್ರ ನೀಡಿರುತ್ತಾರೆ. ಈ ಬಗ್ಗೆ ಮಂಡಲ ಪಂಚಾಯತಿ ಯಾವುದೇ ನಿಯಮಾವಳಿಗಳನ್ನು ಪಾಲಿಸದೇ ಇದ್ದ ಪ್ರಯುಕ್ತ ದಿನಾಂಕ 20-10-93ರಲ್ಲಿ ತುಮಕೂರು ಜಿಲ್ಲಾ ಪಂಚಾಯತ್ ಹಕ್ಕುಪತ್ರಗಳ ನಡವಳಿಕೆಗಳನ್ನು ರದ್ದುಪಡಿಸಿದ್ದು ಅಲ್ಲದೇ ಅಂದಿನ ಆಶ್ರಯ ಯೋಜನೆ ನಿಯಮಾವಳಿಗಳ ಪ್ರಕಾರ ಹಂಚಲು ಸೂಚಿಸಿದ ಮೇರೆಗೆ ಈ 79 ಫಲಾನುಭವಿಗಳ ಪೈಕಿ 32 ಜನ ಮನೆಗಳನ್ನು ನಿರ್ಮಾಣ ಮಾಡಿದ್ದರಿಂದ ಇವರನ್ನು ಹೊರತುಪಡಿಸಿ ಉಳಿಕೆ ಎಲ್ಲಾ ಮಂಜೂರಾತಿಯನ್ನು ರದ್ದುಪಡಿಸಲಾಗಿತ್ತು.

1995-96ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಕೆಳಕಾಣಿಸಿದ 5 ಜನ ಫಲಾನುಭವಿಗಳ ಹೆಸರು ಸೇರ್ಪಡೆಯಾಗಿದ್ದರಿಂದ, ಅಲ್ಲದೆ ಈ ಐವರು ನಾಲ್ಕೈದು ವರ್ಷಗಳಿಂದ ಈಗ ಮಂಜೂರಾಗಿರುವ ನಿವೇಶನಗಳಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದರು ಎಂದು ದಿನಾಂಕ : 14-2-96ರಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಹಕ್ಕುಪತ್ರ ನೀಡಿದ್ದಾರೆ.

1) ರಾಮಚಂದ್ರಯ ತಂದೆ ತಿಮ್ಮಯ್ಯ ಬೋವಿ ಎಸ್.ಸಿ
2) ರಂಗನಾಥ ತಂದೆ ಗೋವಿಂದಪ್ಪ, ಬೋವಿ ಎಸ್.ಸಿ
3) ರಾಜಪ್ಪ ತಂದೆ ರಂಗಯ್ಯ ಎಸ್.ಸಿ.
4) ಓಬಳಮ್ಮ ಗಂಡ ಓಬಳಯ್ಯ ಎಸ್.ಸಿ.
5) ಚಿತ್ತಯ್ಯ ವುರಫ್, ಹೊಂಬಳೀಗೌಡ ತಂದೆ ಚಿತ್ರಜ್ಜಗೋಲ್ಲರು (ಅಜೀನಹಳ್ಳಿ ಗೊಲ್ಲರಹಟ್ಟಿ ಗ್ರಾಮಟಾಣ)

ಈ ನಿವೇಶನ ಹಂಚಿಕೆ ಸಂಬಂಧಪಟ್ಟ ಗ್ರಾಮದಲ್ಲಿ ಮಹಾಜರು ನಡಿಸಿ ನಿವೇಶನ ಹಂಚಿಕೆ ಮಾಡಲಾಗಿದೆ. ಈ ಬಗ್ಗೆ ತಾಲ್ಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಅನುಮೋದನೆ ನೀಡಿರುವುದಿಲ್ಲ, ಕೇವಲ ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಆದೇಶಾನುಸಾರ ಕಾರ್ಯನಿರ್ವಾಹಕ ಅಧಿಕಾರಿಯವರು ದಿನಾಂಕ : 14-2-96ರಂದು ನಿವೇಶನ ಹಕ್ಕುಪತ್ರಗಳನ್ನು ನೀಡಿರುತ್ತಾರೆ. ಈ ಬಗ್ಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಕೂಡಲೇ ಖುದ್ದು ಸ್ಥಳ ತನಿಖೆ ನಡೆಸಿ ಹಂಚಿಕೆ ನಿಯಮಗಳು ಹಾಗೂ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ಅನ್ವಯ ಸೂಕ್ತ ಕ್ರಮ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದಾರೆ.

(5) ಕುಂದಾಪುರ ಕ್ಷೇತ್ರದ ಹುಣ್ಸಿಮಕ್ಕಿ ಬೇಳೂರು ರಸ್ತೆಯ ಟೆಂಡರ್ ಕುರಿತು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಕುಂದಾಪುರ ಕ್ಷೇತ್ರದ ಹುಣ್ಸಿಮಕ್ಕಿ ಬೇಳೂರು ರಸ್ತೆ ಕಳೆದ ವರ್ಷ ಟೆಂಡರಿನಲ್ಲಿ ಮಾಡಲಾದ ಟಾರು ರಸ್ತೆ, ಈ ವರ್ಷ ಹಾಳಾಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದೆ. ಈ ಬಗ್ಗೆ ತನಿಖೆ ನಡೆಸುವುದರೊಂದಿಗೆ ಸರಿಪಡಿಸುವ ವ್ಯವಸ್ಥೆ ಮಾಡಬೇಕಾಗಿ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಹುಣ್ಸಿಮಕ್ಕಿ ಬೇಳೂರು ರಸ್ತೆಯನ್ನು 1992-93ನೇ ಸಾಲಿನಲ್ಲಿ ಜಿಲ್ಲಾಪರಿಷತ್ತಿನ ಮುಖ್ಯ ರಸ್ತೆಯನ್ನಾಗಿ ಮೈದರ್ಜೆಗೆ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಲಾಗಿದೆ. ಈ ರಸ್ತೆಯು ಉದ್ದ 13 ಕಿ.ಮೀ. ಇದ್ದು 2.37

ಕಿ.ಮೀ. ರಸ್ತೆ ಡಾಂಬರೀ ರಸ್ತೆ, 3.4 ಕಿ.ಮೀ. ಜೆಲ್ಲಿ ರಸ್ತೆ ಹಾಗೂ 7.20 ಕಿ.ಮೀ. ಉದ್ದ ಮಣ್ಣಿನ ರಸ್ತೆಯಾಗಿದೆ. 1994-95ನೇ ಸಾಲಿನಲ್ಲಿ ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ 1.6 ಕಿ.ಮೀ. ಉದ್ದಕ್ಕೆ ಡಾಂಬರೀಕರಣ ಮಾಡಲಾಯಿತು. ಇದರಲ್ಲಿ ಸುಮಾರು 50 ಮೀಟರ್ ಉದ್ದಕ್ಕೆ ರಸ್ತೆಯು ಮಳೆಗಾಲದಲ್ಲಿ ಕುಸಿದಿದ್ದು ಆ ಭಾಗವನ್ನು ಶಕ್ತಿಯುತವಾಗಿ ಮಾಡಲಾಗುತ್ತದೆ. 1995-96ನೇ ಸಾಲಿನಲ್ಲಿಯೂ ಈ ರಸ್ತೆಯ ಆಯ್ದ ಭಾಗಗಳಲ್ಲಿ ಜಲ್ಲಿ ಹಾಕಿ ಡಾಂಬೀಕರಣ ಮಾಡಲು ಸುಮಾರು ಆರು ಲಕ್ಷ ರೂಪಾಯಿಗಳ ಅಂದಾಜಿಗೆ ಮಂಜೂರಾತಿ ನೀಡಿದ್ದು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಕಾಮಗಾರಿಯನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲಾಗಿದೆ.

(6) ಸರ್ವಜ್ಞನ ಜನ್ಮಸ್ಥಳ ಅಬಲೂರಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು

ಶ್ರೀ ಯು.ಬಿ. ಬಣಕಾರ್ : ಸನ್ಮಾನ್ಯ ಅಧ್ಯಕ್ಷರೇ, ಸರ್ವಜ್ಞನ ಜನ್ಮ ಸ್ಥಳವಾದ ಹಿರೇಕೆರೂರ ತಾಲ್ಲೂಕು ಅಬಲೂರಿನಲ್ಲಿ ಹಿಂದಿನ ಸರಕಾರ 2 ಹಂತದ ಕೆಲಸಗಳನ್ನು ಹಮ್ಮಿಕೊಳ್ಳಲಾಗಿತ್ತು. ಅದರಲ್ಲಿ 1ನೇ ಹಂತದ ಕೆಲಸ ಹಿರೇಕೆರೂರ ಅಬಲೂರ, ಕೋಡ ರಸ್ತೆಯನ್ನು ಮೆಟಲಿಂಗ್ ಮಾಡಿ ಅಗಲ ಮಾಡುವುದು. ಈಗ ಮುಗಿಸಿದೆ. ಆದರೆ 2ನೇ ಹಂತದ ಕೆಲಸವಾದ ಡಾಂಬರೀಕರಣ ಇನ್ನೂ ಪ್ರಾರಂಭವಾಗಿಲ್ಲ. ಈಗ ಮಾಡಿದ ಮೆಟಲಿಂಗ್ ರಸ್ತೆ ಕಿತ್ತು ಹೋಗುತ್ತಿದೆ ಕಾರಣ ಬೇಗನೆ ಡಾಂಬರೀಕರಣದ ಕೆಲಸ ಪ್ರಾರಂಭ ಮಾಡಲು ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಉತ್ತರಗಳನ್ನು ನಂತರ ಒದಗಿಸಲಾಗುವುದು.

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾವನೆಯನ್ನು ಮಂಡಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾವು ಮೊನ್ನೆ ಬಿಸನೆಸ್ ಅಡ್ವೈಸರಿ ಕಮಿಟಿ ಸೇರಿದಾಗ ಇದೇನು ಪ್ರಸ್ತಾಪ ಆಗಿರಲಿಲ್ಲ. ಮತ್ತು ಇದರ ಬಗ್ಗೆ ನಮ್ಮಲ್ಲಿ ಮಾಹಿತಿ ಇಲ್ಲ ಏಕೆಂದರೆ ಇವೊತ್ತೆ ನೀವು ಕನ್ಸಿಡರೇಶನ್‌ಗೂ ತೆಗೆದುಕೊಳ್ಳುತ್ತಿದ್ದೀರಿ.

ಉಪಾಧ್ಯಕ್ಷರು : ಇಲ್ಲ ಇವೊತ್ತು ಕನ್ಸಿಡರೇಶನ್‌ಗೆ ತೆಗೆದುಕೊಳ್ಳುವುದಿಲ್ಲ. ಇವೊತ್ತು ಮಂಡನೆ ಅಷ್ಟೆ.

ಶಾಸನ ರಚನಾ ಕಾರ್ಯಕಲಾಪಗಳು

ಎ) ವಿಧೇಯಕ ಮಂಡನೆ

ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕ, 1996

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವನೆ ಏನೆಂದರೆ :